(Interruptions)

MR. SPEAKER : We have commenced the question hour at 11.15PM and I an closing the question hour at 12.15 pm. you can send another question.

(Interruptions)

SRI D.B. CHANDREGOWDA: If the Member does not behave, you have to name him.

(Interruptions)

ರಾಜ್ಯದ ಕರಾವಳಿ ಪ್ರದೇಶದಲ್ಲಿ ಅಕ್ರಮ ಮರಳು ಸಾಗಾಣಿಕೆ

98 (1045) ಶ್ರೀ ಜೆ. ಡಿ. ನಾಯಕ್ (ಭಟ್ಕಳ) : ಮಾನ್ಯ ಗಣಿ ಮತ್ತು ಭೂ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಖನಿಜ ನೀತಿ 2000ರಂತೆ ಮರಳು (Sand) ತೆಗೆಯುವ ಹಾಗೂ ಸಾಗಾಣಿಕೆ ಮಾಡಲು ಪಾಲಿಸಬೇಕಾದ ಕಾನೂನು ಕ್ರಮಗಳು ಏನು?

ಆ) ರಾಜ್ಯದ ಕರಾವಳಿ ಪ್ರದೇಶದಲ್ಲಿ ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? ವಿವರ ನೀಡುವುದು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಕರ್ನಾಟಕ ಖನಿಜ ನೀತಿ 2000ರ ಅನ್ವಯದಲ್ಲಿ ಮರಳು ತೆಗೆಯುವ ಹಾಗೂ ಸಾಗಾಣಿಕೆ ಮಾಡಲು ಯಾವುದೇ ಕಾನೂನು ಕ್ರಮಗಳು ಇರುವುದಿಲ್ಲ. ಆದರೆ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಎ 2 ಎಂಎಂಎನ್ 98(2) ದಿನಾಂಕ 16- 10- 2000 ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮ 21(1) ಮತ್ತು 21(2) ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ ಇದು ಸಾಧಾ ಮರಳಿಗಾಗಿ ದಿನಾಂಕ 16- 10- 2000ರಂದು ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಕಡೆ ಹರಾಜಿನ ಮೂಲಕ ಕಲ್ಲು ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ನಿಯಮವನ್ನು ತರಲಾಗಿದೆ. ಅದರಂತೆ ರಾಜ್ಯಪತ್ರದಲ್ಲಿ ಹರಾಜು ಮಾಡುವ ಪ್ರದೇಶವನ್ನು ಪ್ರಕಟಿಸಿ ಹರಾಜು ಮೂಲಕ ಒಂದು ವರ್ಷದವರೆಗೆ ಮಂಜೂರು ಮಾಡಬಹುದು ಮತ್ತು ಅಮಲ್ಜಾರಿ ಮಾಡಿದ ನಂತಹ ಸಾಗಾಣಿಕೆ ಮಾಡಬಹುದು. ಸಿಲಿಕಾ ಮರಳನ್ನು ಮುಖ್ಯ ಖನಿಜವೆಂದು ವರ್ಗೀಕರಿಸಿರುತ್ತಾರೆ. ಸದರಿ ಖನಿಜಕ್ಕೆ ಗಣಿ ಗುತ್ತಿಗೆಯನ್ನು ಎಂ.ಎಂ.(ಡಿ.ಆರ್) ಆಕ್ಟ್ 1957 ಮತ್ತು ಖನಿಜ ರಿಯಾಯಿತಿ ನಿಯಮ 1960 ಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆದು ಮಂಜೂರಾಗುತ್ತದೆ. ಗಣಿ ಗುತ್ತಿಗೆದಾರರು ಮುಂಗಡ ರಾಜಧನ ಪಾವತಿಸಿ ಖನಿಜ ಸಾಗಾಣಿಕೆ ಪರವಾನಿಗೆಗಳನ್ನು ಖನಿಜ ರಿಯಾಯಿತಿ ನಿಯಮ 1960ರಂತೆ ಪಡೆಯುತ್ತಾರೆ.

ಆ) ಬಂದಿರುತ್ತದೆ

ಇ) ಅನಧಿಕೃತ ಮರಳು ಸಾಗಾಣಿಕೆಯನ್ನು ತಡೆಯಲು ತನಿಖಾ ಠಾಣೆಗಳು ರಚಿತಗೊಂಡಿದ್ದು ಪರವಾನಿಗೆ ಇಲ್ಲದೆ ವಾಹನಗಳನ್ನು ತಪಾಸಣೆ ಮಾಡಿ ದಂಡ ವಿಧಸಲಾಗುತ್ತಿದೆ. 1999-2000ನೇ ಸಾಲಿನಲ್ಲಿ 72,425 ರೂಗಳು ಮತ್ತು 2000-2001ನೇ ಸಾಲಿನಲ್ಲಿ ಜನವರಿ ಅಂತ್ಯದವರೆಗೆ ಒಟ್ಟು 2,22,800 ರೂಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ. ಮತ್ತು ಸಂಚಾರಿ ದಳವನ್ನು ರಚಿಸಲಾಗಿದ್ದು ಈ ದಳವು ಸಹ ಅನಧಿಕೃತ ಸಾಗಾಣಿಕೆಯನ್ನು ತಡೆಯಲು ಶ್ರಮ ವಹಿಸುತ್ತಿದೆ.

ಶ್ರೀ ಜೆ. ಡಿ. ನಾಯಕ್ : ಅಧ್ಯಕ್ಷರೇ, ಈ ರಾಜ್ಯದ ಕರಾವಳಿ ಪ್ರದೇಶದಲ್ಲಿ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿದೆ, ಅದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಸಚಿವರನ್ನು ಕೇಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಅಧ್ಯಕ್ಷರೆ, ಮರಳಿನ ವಿತರಣೆ ಬಗ್ಗೆ ನಾವು ಹೊಸ ನೀತಿ ಅನುಸರಿಸುತ್ತಿದ್ದೇವೆ. ಆಯಾ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ತಹಸೀಲ್ದಾರ್, ತಾಲ್ಲೂಕು ಪಂಚಾಯಿತಿಯ ಎಕ್ಸಿಕ್ಯುಟಿವ್ ಅಧಿಕಾರಿ ಮತ್ತು ಸಣ್ಣ ನೀರಾವರಿ ಇಲಾಖೆ ಹಾಗೂ ಜಿಲ್ಲಾ ಪಂಚಾಯ್ತಿಯ ಎಇಇ.ಗಳನ್ನೆಲ್ಲ ಸೇರಿಸಿ ಒಂದು ಸಮಿತಿ ಮಾಡಿ ಎಲ್ಲೆಲ್ಲಿ ಈ ಮರಳಿನ ವಿತರಣೆ ಹಾಗೂ ನಿರ್ಬಂಧ ಮಾಡಬೇಕೆಂದು ಹೊಸ ವ್ಯವಸ್ಥೆಯನ್ನೇ ಜಾರಿಗೆ ತಂದಿದ್ದೇವೆ. ಅದನ್ನೂ ಮೀರಿ ಮರಳಿನ ಕಳ್ಳಸಾಗಾಣಿಕೆ ನಡೆದರೆ ಅದನ್ನು ತಡೆಯಲು ನಮ್ಮ ಹತ್ತಿರ ಸ್ಕ್ವಾಡ್ ಇದೆ, ಅಲ್ಲಲ್ಲಿ ನಾವು ಚೆಕ್‌ಪೋಸ್ಟ್‌ಗಳನ್ನೂ ಮಾಡಿದ್ದೇವೆ. ಅಲ್ಲಿಗತ ಬರುವ ಲಾರಿಗಳನ್ನು ತನಿಖೆ ಮಾಡಿ ಫೈನೂ ವಿಧಿಸುತ್ತಿದ್ದೇವೆ. ಉತ್ತರ ಕನ್ನಡ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಸುಮಾರು 2, 28, 800 ರೂಪಾಯಿದಂಡವನ್ನೂ ಇದುವರೆಗೆ ವಸೂಲು ಮಾಡಿದ್ದೇವೆ.

ಶ್ರೀ ಜೆ. ಡಿ. ನಾಯಕ್ : ನಮ್ಮ ಜಿಲ್ಲೆಯಲ್ಲಿ ಇರುವ ಸಮುದ್ರತೀರಗಳಲ್ಲಿ ಮರಳು ಕಳ್ಳಸಾಗಾಣಿಕೆ ಆಗುತ್ತಿದೆ. ಅದರ ಬಗ್ಗೆ ಯಾವುದೇ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ. ಸಮುದ್ರ ತೀರದಲ್ಲಿ ಕಳ್ಳಸಾಗಾಣಿಕೆಯಾದ್ದರಿಂದ ಸಾಕಷ್ಟು ಜಮೀನುಗಳನ್ನು ಮತ್ತು ಮನೆಗಳನ್ನು ಇವತ್ತು ಸಮುದ್ರ ತೀರದ ಜನರು ಕಳೆದುಕೊಳ್ಳಬೇಕಾಗಿದೆ. ಸರ್ಕಾರದ ಬೊಕ್ಕಸಕ್ಕೂ ಕೂಡ ಸಾಕಷ್ಟು ಹಾನಿಯಾಗುತ್ತದೆ. ಏಕೆಂದರೆ ತೀರದಲ್ಲಿ ಮುಖ್ಯವಾಗಿ ನನ್ನ ಕ್ಷೇತ್ರ ಭಟ್ಕಳ ಇರಬಹುದು, ಹೊನ್ನಾವರ, ಕುಮಟಾ, ಅಂಕೋಲ, ಕಾರವಾರದಲ್ಲಿ ಮತ್ತು ಬೇರೆ ಜಿಲ್ಲೆಯಲ್ಲೂ ಕೂಡ ಸಾಕಷ್ಟು ಸಮುದ್ರಕೊರತೆಗಳಾಗಿವೆ. ಇದು ಸರ್ಕಾರದ ಗಮನಕ್ಕೆ ಬಂದರೂ ಕೂಡ ಯಾವುದೇ ಅಧಿಕಾರಿಗಳು ಅದನ್ನು ತಡೆಗಟ್ಟುತ್ತಿಲ್ಲ. ಕಟ್ಟಡ ಕಟ್ಟುವುದಕ್ಕಾಗಿ ದಿನನಿತ್ಯ ಸಾಕಷ್ಟು ಮರಳು ಲಾರಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಾಣಿಕೆಯಾಗುತ್ತದೆ ಇವರು ಸ್ಕ್ವಾಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಇದುವರೆಗೂ ಯಾವುದೇ ಸ್ಕ್ವಾಡ್ ಆಗಿಲ್ಲ. ಯಾವುದೇ ಲಾಗಿಗಳನ್ನು ಹಿಡಿದ ಬಗ್ಗೆಯಾಗಲೀ, ದಂಡ ತೆಗೆದುಕೊಂಡಿರುವುದು ಯಾವುದೂ ನಮ್ಮ ನಮನಕ್ಕೆ ಬಂದಿಲ್ಲ. ಯಾವ ಇಲಾಖೆಯವರು ಕೂಡ ಅದರ ಬಗ್ಗೆ ಪ್ರತಿಬಂಧ ಮಾಡಿಲ್ಲ. ಇನ್ನು ಮುಂದಾದರೂ ಕೂಡ ಆ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ನಾವು ಇದ್ದಾಗ ಸರ್ಕಾರ ಮರಳಿನ ಬಗ್ಗೆ ಒಂದು ಹೊಸ ಪಾಲಿಸಿಯನ್ನು ಮಾಡಿದ್ದೆವು ಬರುವಂಥ ಆದಾಯದಲ್ಲಿ ಪಂಚಾಯಿತಿಗಳಿಗೆ ಅರ್ಧ ಮತ್ತು ಲೋಕಲ್ ಬಾಡೀಸ್‌ಗೆ ಅಲ್ಲಿರುವಂಥ ಅರ್ಧ ಹಂಚುವುದು. ಮಾಡುವುದರಿಂದ ಅಕ್ರಮವಾಗಿ ಸಾಗಾಣಿಕೆ ಮಾಡುವುದನ್ನು ತಡೆಗಟ್ಟಬಹುದು. ಅದನ್ನು ಸರ್ಕಾರ ಇಟ್ಟಿದ್ದಾರೋ ಅದನ್ನು ರದ್ದುಮಾಡಿದ್ದಾರೋ ಗೊತ್ತಾಗಿಲ್ಲ. ರಾಯಲ್ಟಿಯನ್ನು ಕಲೆಕ್ಟ್ ಮಾಡಬೇಕಾದರೆ ಪಂಚಾಯಿತಿಗಳಿಗೆ ಅರ್ಧ ಕೊಟ್ಟು ಇನ್ನರ್ಧವನ್ನು ಅಲ್ಲಿರುವ ಲೋಕಲ್ ಪಂಚಾಯಿತಿಗಳಿಗೆ ಕೊಡುವುದು. ಇವತ್ತು ಯಾವ ಲೋಕಲ್ ಪಂಚಾಯಿತಿಗಳ ಹಣಕಾಸಿನ ವ್ಯವಸ್ಥೆ ಸರಿ ಇಲ್ಲ. ಇದನ್ನು ಮಾಡಿದರೆ ಅದಕ್ಕೆ ಆದಾಯವಾದರೂ ಆಗುತ್ತದೆ. ಇವತ್ತು ನೂರಕ್ಕೆ 60-70ರಷ್ಟು ಮರಳು ಕಳ್ಳ ಸಾಗಾಣಿಕೆಯಾಗುತ್ತದೆ. ಮಾನ್ಯ ಸಚಿವರು ಇವತ್ತು ಹೇಳಿದರು, ತಹಶೀಲ್ದಾರ್‌ಗೆ ಅಧಿಕಾರವನ್ನು ಕೊಟ್ಟಿದ್ದಾರೆ, ನಿಜ. ಎಲ್ಲಾ ನಿಜ. ಆದರೂ ಕೂಡ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ. ಅಲ್ಲಿ ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಟ್ಟರೆ ಇದರಿಂದ ಸರ್ಕಾರಕ್ಕೂ ಆದಾಯ ಸಿಕ್ಕಂತಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಯೋಚಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇಂಗ್ಲೀಷ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಕನ್ನಡದಲ್ಲಿ ಕೊಡುವುದೇ ಇಲ್ಲ. ಹೀಗಾದರೆ ಏನು ಮಾಡುವುದು? ಇದು ಕರ್ನಾಟಕ ವಿಧಾನಸಭೆ ಹೌದೋ ಅಲ್ಲವೋ? ನಾವು ಉಪ ಪ್ರಶ್ನೆಯನ್ನು ಹೇಗೆ ಕೇಳಬೇಕು? ಇಲ್ಲಿ ಇಂಗ್ಲೀಷ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಏನಾದರೂ ಕಟ್ಟುನಿಟ್ಟಿನ ಆದೇಶವನ್ನು ತಾವು ಕೊಡಬೇಕು. ಇಲ್ಲದಿದ್ದರೆ ಇದರ ಬಗ್ಗೆ ನಾವು ಸತ್ಯಾಗ್ರಹವನ್ನು ಮಾಡಬೇಕಾಗುತ್ತದೆ. ಇದು ಕರ್ನಾಟಕ ವಿಧಾನಸಭೆ. ಕನ್ನಡ ಭಾಷೆಗೆ ಪ್ರಾಶ್ಯ ಬೇಕು. ತಮ್ಮ ಕಛೇರಿಯಿಂದ ದಿನವೂ ನಮಗೆ ಇಂಗ್ಲೀಷ್‌ನಲ್ಲಿ ಯೇ ಬರುತ್ತವೆ. ಆಮೇಲೆ ಇಲ್ಲಿ ನಮ್ಮ ಸ್ಥಾನದಲ್ಲಿ ಕನ್ನಡದ ಪ್ರತಿಯನ್ನು ತಂದು ಇಟ್ಟಿರುತ್ತಾರೆ.

(ಗೊಂದಲ)

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಆಡಳಿತ ವ್ಯವಹಾರವೆಲ್ಲಾ ಕನ್ನಡದಲ್ಲೇ ಎಂದು ಬೋರ್ಡ್ ಹಾಕಿದ್ದೀರಿ. ಏಕೆ ಹಾಕಿದ್ದೀರಿ ಆ ಬೋರ್ಡ್‌ಗಳನ್ನು ಕಿತ್ತು ಬಿಸಾಕಿ ಆಚೆಗೆ ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ ಎಂದು ಏನೇನೋ ಬರೆಸುವುದು ಎಲ್ಲಾ ಇಂಗ್ಲೀಷ್‌ನಲ್ಲಿ ಕೊಡುವುದು.

ಶ್ರೀ ವಿ. ಮುನಿಯಪ್ಪ : ಉತ್ತರ ಇಂಗ್ಲೀಷ್ ಮತ್ತು ಕನ್ನಡ ಎರಡಲ್ಲೂ ಏಕೆ ಬೇಕು?

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : ಈ ರೀತಿಯಾದರೆ ಕನ್ನಡ ಕಾವಲು ಸಮಿತಿ ಏಕೆ ಬೇಕು?

(ಗೊಂದಲ)

ಅಧ್ಯಕ್ಷರು : ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಕಳುಹಿಸಿಕೊಡಬೇಕು. ಅಕಸ್ಮಾತ್ ಇಂಗ್ಲಿಷ್‌ನಲ್ಲಿ ಮಾತ್ರ ಕೊಟ್ಟರೆ ನಾವು ತೆಗೆದುಕೊಳ್ಳುವುದೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ತಮ್ಮ ಆದೇಶವನ್ನು ಒಪ್ಪಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಅದನ್ನು ಜೋಡಿಸುತ್ತಾರಲ್ಲ, ಅಲ್ಲೆಲ್ಲೋ ಮಿಸ್ಟೇಕ್ ಆಗಿರಬಹುದು. ಅದನ್ನು ಸರಿಪಡಿಸುತ್ತೇನೆ ಸ್ವಾಮಿ

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ನಿಮ್ಮ ಕಾರ್ಯಾಲಯದ ಬಗ್ಗೆಯೂ ಹೇಳುತ್ತೇನೆ. ನಮಗೆ ರಾತ್ರಿ ವೇಳೆ ಉತ್ತರವನ್ನು ಕಳುಹಿಸುತ್ತಾರಲ್ಲ, ಅದನ್ನು ಇಂಗ್ಲಿಷ್‌ನಲ್ಲಿ ಕುಳುಹಿಸುತ್ತಾರೆ. ಕನ್ನಡ ಪ್ರಶ್ನೆಗಳನ್ನು ನಮ್ಮ ಸ್ಥಾನಗಳಲ್ಲಿ ಇಟ್ಟಿರುತ್ತಾರೆ. ಕನ್ನಡದ ಪ್ರತಿಗಳನ್ನು ನಮಗೆ ಅಲ್ಲಿ ಕೊಡಿ. ನಮ್ಮ ಸ್ಥಾನದಲ್ಲಿ ಇಂಗ್ಲಿಷ್‌ನಲ್ಲಿ ಇರುವುದನ್ನು ತಂದು ಇಡಿ, ಬೇಡ ಎನ್ನುವುದಿಲ್ಲ. ನಾಳೆಯಿಂದ ನ ಗೆ ಕನ್ನಡದಲ್ಲಿ ಉತ್ತರ ಬಾರದಿದ್ದರೆ ನಾವು ಇಲ್ಲಿ ಸತ್ಯಾಗ್ರಹ ಮಾಡುತ್ತೇವೆ.

ಅಧ್ಯಕ್ಷರು : ಸರಿಪಡಿಸೋಣ ಎಂದು ಹೇಳಿದ್ದೇನೆ ಪ್ರಶ್ನೋತ್ತರವನ್ನು 12- 15ಕ್ಕೆ ನಾನು ಮುಕ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನಮ್ಮ ಹತ್ತಿರ ಇನ್ನೂ ಐದು ಪ್ರಶ್ನೆಗಳಿವೆ. ಸಮಯ ಇನ್ನು 15 ನಿಮಿಷ ಮಾತ್ರ ಇದೆ. ಪಾಟೀಲರೇ, ತಾವು ಕಂಟಿನ್ಯೂ ಮಾಡಿ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ತರುವ ಉಸುಕು ಎಷ್ಟು? ಅದರ ಬಗ್ಗೆ ಏನಾದರೂ ಸರ್ವೆ ಮಾಡಿಸಿದ್ದೀರಾ? ತಾವು ಅನಧಿಕೃತವಾಗಿ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಆ ಕಾರಣದಿಂದ ಎಷ್ಟು ಅನಧಿಕೃತವಾಗಿ ಬರುತ್ತಿದೆ, ಸರ್ಕಾರಕ್ಕೆ ಬರುವ ಉತ್ಪನ್ನವೆಷ್ಟು? ಇದರಲ್ಲಿ ಎಷ್ಟು ಸೋರಿ ಹೋಗುತ್ತಿದೆ ಎಂದು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮರಳು ಸಾಗಾಣಿಕೆಯನ್ನು ಆಯಾ ಪಂಚಾಯಿತಿಗಳಿಗೆ ಕೊಡಬೇಕು. ಪಂಚಾಯಿತಿಯವರು ಅದಕ್ಕೆ ತೆರಿಗೆಯನ್ನು ವಸೂಲು ಮಾಡಬೇಕೆಂದು ಹೇಳಿ ಈ ಮುಂಚೆ ಆರ್ಡ್ಲ್ ಮಾಡಿರುವುದು ಸರಿಯಷ್ಟೆ. ನಮ್ಮ ತುಮಕೂರು ಜಿಲ್ಲೆಯಿಂದ ದಿನವೂ ಸಾವಿರಾರು ಲೋಡು ಮರಳು ಬೆಂಗಳೂರಿಗೆ ಬರುತ್ತಿದೆ. ಯಾವುದೇ ಪಂಚಾಯಿತಿಯವರು ಒಂದು ಟೋಲ್‌ಗೇಟ್ ಹಾಗಿ ತೆರಿಗೆಯನ್ನು ವಸೂಲು ಮಾಡಿ ಎಂದು ಸರ್ಕಾರದಿಂದ ಆದೇಶ ಹೋಗಿಲ್ಲ. ಇವತ್ತು ಕಳ್ಳಂಬೆಳ್ಳ ಆಗಬಹುದು, ಕೊರಟಗೆರೆ ಆಗಬಹುದು, ಮಧುಗಿರಿ ಆಗಬಹುದು, ಪಾವಗಡ ಆಗಬಹುದು, ಕುಣಿಗಲ್ ಆಗಬಹುದು, ಹೆಚ್ಚಿಗೆ ಈ ಭಾಗಗಳಿಂದ ಮರಳು ಬರುತ್ತಿದೆ. ಇದನ್ನು ದಯಮಾಡಿ ಕಂದಾಯ ಇಲಾಖೆಗೆ ವಹಿಸಿಕೊಟ್ಟರೆ ಅದು ಉತ್ತಮವಾದ ಕೆಲಸವಾಗುತ್ತದೆ. ಮಾನ್ಯ ಮಂತ್ರಿಗಳು ದಯಮಾಡಿ ಅದನ್ನು ಮಾಡಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಮರಳಿನ ವಿತರಣಾ ವ್ಯವಸ್ಥೆಯ ಬಗ್ಗೆ ಯಾವ ರೀತಿಯನ್ನು ಅನುಸರಿಸಿದ್ದೇವೆ ಎನ್ನುವ ಬಗ್ಗೆ ವಿವರವಾಗಿ ಹೇಳಿದ್ದೇನೆ. ಆ ಕೆಲಸ ಈಗಾಗಲೇ ರಾಜ್ಯದ್ಯಂತ ಎಲ್ಲಾ ಅಸಿಸ್ಟೆಂಟ್ ಕಮೀಷನರ್‌ಗಳು ಅವರವರ ವ್ಯಾಪ್ತಿಯಲ್ಲಿ ಬರುವಂಥದ್ದನ್ನು ಕ್ರಮ ತೆಗೆದುಕೊಂಡು ಅನೇಕ ಕಡೆ ಹರಾಜು ಮಾಡಲಿಕ್ಕೆ ಹೊರಟಿದ್ದಾರೆ. ಜೊತೆಗೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ದಾಸ್ತಾನು ಎಲ್ಲೆಲ್ಲಿ ನಾವು ಗುರುತಿಸುತ್ತೇವೆ, ಮರಳು ವಿತರಣೆಯನ್ನು, ಆ ಪ್ರದೇಶದಿಂದ ಬರುವ ರಾಯಲ್ಟಿಯಲ್ಲಿ ಅರ್ಧ ಭಾಗ ಸರ್ಕಾರದ ಖಜಾನೆಗೆ ಬರುತ್ತದೆ. ಇನ್ನರ್ಧ ಭಾಗ ಪಂಚಾಯಿತಿಗೆ ಹೋಗುತ್ತದೆ. ಆ ತರಹ ವ್ಯವಸ್ಥೆಯನ್ನು ಮಾಡಿದ್ದೇವೆ. ಹಿಂದೆ ಪಂಚಾಯಿತಿಗಳಿಗೆ ಕೊಟ್ಟಾಗ ಏನಾಗಿತ್ತು ಎಂದರೆ ಒಂದು ಕಡೆ ಪಂಚಾಯಿತಿಗೆ ಕೊಟ್ಟ ಅಧಿಕಾರವನ್ನು ಅವರುಗಳು ಚಲಾಯಿಸಲಿಲ್ಲ. ಮೂರು ವರ್ಷಗಳಾದ ಮೇಲೆ ಅದನ್ನು ವಾಪಸ್ ತೆಗೆದುಕೊಂಡಿದ್ದೇವೆ.

ಅಥಣಿ ತಾಲ್ಲೂಕಿನಲ್ಲಿ ಕುಶಲ ಕರ್ಮಿಗಳಿಗೆ ನಿರ್ಮಿಸಲಾಗಿರುವ ವಸತಿ ಕಾರ್ಯಗಾರಗಳು

99 (1068) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಗಾರಿಕಾ ಇಲಾಖೆಯಿಂದ ಮುಖಾಂತಹ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಕುಶಲಕರ್ಮಿಗಳಿಗೆ ನಿರ್ಮಿಸಲಾಗಿರುವ ವಸತಿ ಕಾರ್ಯಾಗಾರಗಳು ಎಷ್ಟು; (ಗ್ರಾಮವಾರು ವಿವರ ನೀಡುವುದು)

ಆ) ಈ ವಸತಿ ಕಾರ್ಯಾಗಾರಗಳಲ್ಲಿ ವಾಸಿಸುವ ಫಲಾನುಭವಿಗಳಿಗೆ ವಿದ್ಯುತ್, ರಸ್ತೆ, ನೀರು ಕಲ್ಪಿಸದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸವಲತ್ತುಗಳನ್ನು ಒದಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು.

ಇ) 2000-2001ನೇ ವರ್ಷದಲ್ಲಿ ಈ ಯೋಜನೆಯಡಿ ಎಷ್ಟು ವಸತಿ ಕಾರ್ಯಗಾರಗಳನ್ನು ಯೋಜಿಸಿದೆ?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕೆ ಸಚಿವರು) :

ಅ) ಯಾವುದೇ ವಸತಿ ಹಾಗೂ ಕಾರ್ಯಗಾರಗಳನ್ನು ನಿರ್ಮಿಸಿರುವುದಿಲ್ಲ

ಆ) ಅನ್ವಯಿಸುವುದಿಲ್ಲ

ಇ) 2000-2001ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ರಾಜ್ಯಾದಂತ 250 ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಲು ಉದ್ದೇಶಿಸಿದ್ದು 10 ವಸತಿ ಹಾಗೂ ಕಾರ್ಯಗಾರಗಳನ್ನು ಬೆಳಗಾಂ ಜಿಲ್ಲೆಗೆ ಹಂಚಿಕೆ ಮಾಡಲಾಗಿದೆ.